# ಆಗಾಗ್ಗೆ ಕೇಳುವ ಪ್ರಶ್ನೆಗಳು

**1. ಮುದ್ರಾ ಎಂದರೇನು?**

ಮೈಕ್ರೋ ಯೂನಿಟ್ಸ್ ಡೆವೆಲಪ್‌ಮೆಂಟ್ ಅಂಡ್ ರೀಫೈನಾನ್ಸ್ ಏಜೆನ್ಸಿ ಲಿಮಿಟೆಡ್‌ನ ಸಂಕ್ಷಿಪ್ತ ರೂಪವೇ ಮುದ್ರಾ. ಇದು ಭಾರತ ಸರ್ಕಾರ ಅತಿಚಿಕ್ಕ ಘಟಕಗಳ ಅಭಿವೃದ್ಧಿ ಮತ್ತು ರೀಫೈನಾನ್ಸಿಂಗ್ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರಾರಂಭಿಸಿರುವ ಹೊಸ ಸಂಸ್ಥೆ. ಇದನ್ನು 2016ರ ಹಣಕಾಸು ವರ್ಷದ ಬಜೆಟ್ ಮಂಡನೆಯ ಸಂದರ್ಭದಲ್ಲಿ ಗೌರವಾನ್ವಿತ ಹಣಕಾಸು ಸಚಿವರು ಪ್ರಕಟಿಸಿದರು. ಮುದ್ರಾ ಉದ್ದೇಶ ಕಾರ್ಪೋರೇಟ್‌ರಹಿತ ಸಣ್ಣ ಉದ್ಯಮ ವಲಯಕ್ಕೆ ಹಣಕಾಸು ನೆರವು ನೀಡುವುದು.

**2. ಯಾವುದಕ್ಕಾಗಿ ಮುದ್ರಾ ಪ್ರಾರಂಭಿಸಲಾಗಿದೆ?**

ನಾನ್-ಕಾರ್ಪೋರೇಟ್ ಸ್ಮಾಲ್ ಬ್ಯುಸಿನೆಸ್ ಸೆಕ್ಟರ್(ಕಾರ್ಪೋರೇಟ್ ಅಲ್ಲದೆ ಸಣ್ಣ ಉದ್ಯಮ ವಲಯ-ಎನ್‌ಸಿಎಸ್‌ಬಿಎಸ್)ನಲ್ಲಿ ಉದ್ಯಮಶೀಲತೆಯ ಪ್ರಗತಿಗೆ ಅತಿದೊಡ್ಡ ತಡೆಯೆಂದರೆ ಈ ವಲಯಕ್ಕೆ ಹಣಕಾಸಿನ ನೆರವಿನ ಕೊರತೆ. ಈ ವಲಯದ ಬಹುತೇಕ ಮಂದಿಗೆ ಹಣಕಾಸಿನ ಅಧಿಕೃತ ಮೂಲಗಳಿಗೆ ಪ್ರವೇಶವಿಲ್ಲ. ಭಾರತ ಸರ್ಕಾರ ಶಾಸನ ರೂಪಿಸಿ ಮುದ್ರಾ ಬ್ಯಾಂಕ್ ಸ್ಥಾಪನೆಯ ಮೂಲಕ ಎನ್‌ಸಿಎಸ್‌ಬಿಎಸ್ ವಲಯಕ್ಕೆ ಅಥವಾ ಅಸಂಘಟಿತ ವಲಯದ ಅಗತ್ಯಗಳನ್ನು ಪೂರೈಸುವ ಮೂಲಕ ಮುಖ್ಯವಾಹಿನಿಗೆ ತರುತ್ತಿದೆ. ಪ್ರಾರಂಭದಲ್ಲಿ ಇದನ್ನು ಸಿಡ್ಬಿ(ಖಿಖಆಃಖ) ಅಧೀನ ಸಂಸ್ಥೆಯಾಗಿ ಪ್ರಾರಂಭಿಸಿದೆ.

**3. ಮುದ್ರಾದ ಪಾತ್ರ ಮತ್ತು ಜವಾಬ್ದಾರಿಗಳೇನು?**

ಮುದ್ರಾ ಉತ್ಪಾದನೆ, ವಹಿವಾಟು ಮತ್ತು ಸೇವಾ ಚಟುವಟಿಕೆಗಳಲ್ಲಿ ತೊಡಗಿರುವ ಕಿರು/ಸಣ್ಣ ಉದ್ಯಮಗಳಿಗೆ ಸಾಲ ನೀಡುತ್ತಿರುವ ಎಲ್ಲ ಕೊನೆಯ ಹಂತದ ಹಣಕಾಸು ಸೇವೆ ನೀಡುವ ವಿವಿಧ ಬಗೆಯ ಸಣ್ಣ ಉದ್ಯಮಗಳು ಸೊಸೈಟಿಗಳು, ಟ್ರಸ್ಟ್‌ಗಳು, ಅನುಚ್ಛೇದ ೮ರ ಕಂಪನಿಗಳು(ಮೊದಲು ಅನುಚ್ಛೇದ 25), ಸಹಕಾರ ಸಂಸ್ಥೆಗಳು, ಸಣ್ಣ ಬ್ಯಾಂಕ್‌ಗಳು, ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಇತ್ಯಾದಿ ಬ್ಯಾಂಕೇತರ ಹಣಕಾಸು ಕಂಪನಿಗಳಿಗೆ ರೀಫೈನಾನ್ಸಿಂಗ್ ಜವಾಬ್ದಾರಿ ಹೊಂದಿರುತ್ತದೆ. ಬ್ಯಾಂಕ್ ರಾಜ್ಯ/ಪ್ರಾದೇಶಿಕ ಹಂತದ ಹಣಕಾಸು ಸಂಸ್ಥೆಗಳ ಜೊತೆಗೆ ಸಹಯೋಗ ಹೊಂದಿದ್ದು ಕೊನೆಯ ಹಂತದ ಸಣ್ಣ/ಕಿರು ಉದ್ಯಮಗಳಿಗೆ ಹಣಕಾಸು ಒದಗಿಸುತ್ತದೆ.

**4. ಮುದ್ರಾ ಆಫರಿಂಗ್ ಯಾವುವು? ಮುದ್ರಾ ಹೇಗೆ ಕಾರ್ಯ ನಿರ್ವಹಿಸುತ್ತದೆ?**

ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿಯಲ್ಲಿ ಮುದ್ರಾ ಈಗಾಗಲೇ ತನ್ನ ಪ್ರಾರಂಭಿಕ ಉತ್ಪನ್ನಗಳು/ಯೋಜನೆಗಳನ್ನು ಸೃಷ್ಟಿಸಿದೆ. ಇವುಗಳನ್ನು ‘ಶಿಶು’, ‘ಕಿಶೋರ್’ ಮತ್ತು ‘ತರುಣ್’ ಎಂದು ಫಲಾನುಭವಿ ಕಿರು ಘಟಕ/ಉದ್ಯಮದ ಬೆಳವಣಿಗೆ/ಅಭಿವೃದ್ಧಿಯ ಅಗತ್ಯಕ್ಕೆ ತಕ್ಕಂತೆ ಹೆಸರಿಸಲಾಗಿದೆ ಮತ್ತು ಮುಂದಿನ ಹಂತದ ವಿಸ್ತರಣೆ/ಪ್ರಗತಿಗೆ ಸೂಚಕವಾಗಿಯೂ ಕಾಣುತ್ತದೆ:

- ಶಿಶು: 50,೦೦೦ರೂ.ವರೆಗಿನ ಸಾಲಗಳ ವ್ಯಾಪ್ತಿ
- ಕಿಶೋರ್: 50,೦೦೦ರೂ. ಮತ್ತು 5 ಲಕ್ಷ ರೂ.ವರೆಗೆ
- ತರುಣ್: 5 ಲಕ್ಷ ರೂ. ಮೇಲ್ಪಟ್ಟು 10 ಲಕ್ಷ ರೂ.ವರೆಗಿನ ಸಾಲಗಳ ವ್ಯಾಪ್ತಿ

ಮುದ್ರಾ ರಾಜ್ಯ/ಪ್ರಾದೇಶಿಕ ಹಂತದ ಮಧ್ಯವರ್ತಿ ಸಂಸ್ಥೆಗಳ ಮೂಲಕ ರೀಫೈನಾನ್ಸಿಂಗ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತದೆ. ಮುದ್ರಾದ ಪೂರೈಕೆ ಮಾರ್ಗ ಪ್ರಾಥಮಿಕವಾಗಿ ಎನ್‌ಬಿಎಫ್‌ಸಿಗಳು/ಎಂಎಫ್‌ಐಗಳು ಅಲ್ಲದೆ ಬ್ಯಾಂಕ್‌ಗಳು, ಪ್ರಾಥಮಿಕ ಸಾಲ ಸಂಸ್ಥೆಗಳು ಇತ್ಯಾದಿಗಳಿಗೆ ರೀಫೈನಾನ್ಸಿಂಗ್ ಮಾರ್ಗದಲ್ಲಿ ನೆರವಾಗುತ್ತದೆ.

ಅದೇ ಸಮಯಕ್ಕೆ ಬುಡಮಟ್ಟದಲ್ಲಿ ಪೂರೈಕೆಯ ಮಾರ್ಗವನ್ನು ಅಭಿವೃದ್ಧಿಪಡಿಸಿ ವಿಸ್ತರಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಬೃಹತ್ ಸಂಖ್ಯೆಯಲ್ಲಿ 'ಕೊನೆಯ ಹಂತದ ಫೈನಾನ್ಸಿಯರ್ಸ್' ಕಂಪನಿಗಳು, ಟ್ರಸ್ಟ್‌ಗಳು, ಸೊಸೈಟಿಗಳು, ಸಂಸ್ಥೆಗಳು ಮತ್ತು ಇತರೆ ಜಾಲಗಳಿದ್ದು ಸಣ್ಣ ಉದ್ಯಮಗಳಿಗೆ ಅಸಂಘಟಿತ ಸಾಲಗಳನ್ನು ನೀಡುತ್ತಿವೆ.

**5. ಮುದ್ರಾದ ಗುರಿ ಯಾರು? ಮುದ್ರಾ ನೆರವು ಪಡೆಯಲು ಯಾವ ಬಗೆಯ ಸಾಲಗಾರರು ಅರ್ಹರು?**

ನಾನ್-ಕಾರ್ಪೊರೇಟ್ ಸ್ಮಾಲ್ ಬ್ಯುಸಿನೆಸ್ ಸೆಗ್ಮೆಂಟ್(ಎನ್‌ಸಿಎಸ್‌ಬಿಎಸ್)ನಲ್ಲಿ ಮಿಲಿಯನ್‌ಗಟ್ಟಲೆ ಮಂದಿ ಪ್ರೊಪ್ರೈಟರ್‌ಶಿಪ್/ಪಾರ್ಟನರ್‌ಶಿಪ್ ಸಂಸ್ಥೆಗಳಿದ್ದು ಗ್ರಾಮ ಮತ್ತು ನಗರದ ಸಣ್ಣ ಉತ್ಪಾದನಾ ಘಟಕಗಳು, ಸೇವಾ ವಲಯದ ಘಟಕಗಳು, ಅಂಗಡಿ ಮಾಲೀಕರು, ಹಣ್ಣು/ತರಕಾರಿ ಮಾರಾಟಗಾರರು, ಟ್ರಕ್ ಆಪರೇಟರ್‌ಗಳು, ಫುಡ್ ಸರ್ವೀಸ್ ಘಟಕಗಳು, ರಿಪೇರಿ ಮಳಿಗೆಗಳು, ಮೆಷಿನ್ ಆಪರೇಟರ್‌ಗಳು ಸಣ್ಣ ಕೈಗಾರಿಕೆಗಳು, ಕುಶಲಕರ್ಮಿಗಳು, ಆಹಾರ ಸಂಸ್ಕರಣೆ ಮಾಡುವವರು ಇತ್ಯಾದಿ.

**6. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು(ಆರ್‌ಆರ್‌ಬಿಗಳು) ಮುದ್ರಾದ ನೆರವಿಗೆ ಅರ್ಹವೇ?**

ಹೌದು, ಮುದ್ರಾ ಆರ್‌ಆರ್‌ಬಿಗಳಿಗೆ ಅವುಗಳ ನಗದು ಹೆಚ್ಚಿಸಲು ರೀಫೈನಾನ್ಸ್ ನೆರವು ವಿಸ್ತರಿಸಲಿದೆ.

**7. ಮುದ್ರಾ ವಿಧಿಸುವ ಬಡ್ಡಿ ದರವೇನು?**

ಮುದ್ರಾ ರೀಫೈನಾನ್ಸಿಂಗ್ ಏಜೆನ್ಸಿಯಾಗಿದ್ದು ಕೊನೆಯ ಹಂತದ ಫೈನಾನ್ಸಿಯರ್‌ಗಳಿಗೆ ಈ ವಲಯವನ್ನು ತಲುಪಲಿ ತನ್ನ ನಿಧಿಯನ್ನು ನೀಡುತ್ತದೆ. ತರ್ಕಬದ್ಧ ಬೆಲೆಯೇ ಮುದ್ರಾದಲ್ಲಿ ವಿಶಿಷ್ಟ ಗ್ರಾಹಕ ಮೌಲ್ಯ ಪ್ರತಿಪಾದನೆಯಾಗಿದೆ. ಇದು ವಿವಿಧ ಬಗೆಯ ವಿನೂತನ ಹಣಕಾಸು ಮೂಲಗಳನ್ನು ಬಳಸುವ ಮೂಲಕ ಕೊನೆಯ ಸಾಲಗಾರನ ಸಾಲದ ವೆಚ್ಚ ಕಡಿಮೆ ಮಾಡುತ್ತದೆ.

**8. ಕಾಗದದ ಉತ್ಪನ್ನಗಳ ಸಣ್ಣ ಉದ್ಯಮ ನನಗಿದೆ. ಮುದ್ರಾ ನನಗೆ ನೆರವಾಗುತ್ತದೆಯೇ?**

ಹೌದು. ಮುದ್ರಾ 'ಶಿಶು' ವಿಭಾಗದಲ್ಲಿ 50,000ರೂ.ವರೆಗಿನ ಸಾಲಗಳು ಮತ್ತು 'ಕಿಶೋರ್' ವಿಭಾಗದಲ್ಲಿ 50,000ಕ್ಕಿಂತ ಹೆಚ್ಚು ಮತ್ತು 5 ಲಕ್ಷ ರೂ.ವರೆಗೆ ಸಾಲಗಳನ್ನು ನೀಡುತ್ತದೆ. ಈ ಉತ್ಪನ್ನಗಳನ್ನು ಚಿಕ್ಕ ಉದ್ಯಮಗಳನ್ನು ನಿರ್ವಹಿಸುತ್ತಿರುವ ಗ್ರಾಹಕರಿಗೆಂದೇ ರೂಪಿಸಲಾಗಿದೆ. ಈ ಸಾಲಗಳನ್ನು ಎಂಎಫ್‌ಐಗಳು, ಎನ್‌ಬಿಎಫ್‌ಸಿಗಳು, ಬ್ಯಾಂಕ್‌ಗಳು ಇತ್ಯಾದಿಗಳ ಮೂಲಕ ವಿತರಿಸಲಾಗುತ್ತದೆ.

**9. ನಾನು ಇತ್ತೀಚೆಗೆ ಪದವಿ ಪಡೆದಿದ್ದೇನೆ. ನನ್ನದೇ ವ್ಯಾಪಾರ ಪ್ರಾರಂಭಿಸಲು ಬಯಸಿದ್ದೇನೆ. ಮುದ್ರಾ ನನಗೆ ನೆರವಾಗುತ್ತದೆಯೇ?**

ಮುದ್ರಾ 'ಶಿಶು' ವಿಭಾಗದಲ್ಲಿ 50,000ರೂ.ವರೆಗಿನ ಸಾಲಗಳು ಮತ್ತು 'ಕಿಶೋರ್' ವಿಭಾಗದಲ್ಲಿ 50,000ಕ್ಕಿಂತ ಹೆಚ್ಚು ಮತ್ತು 5 ಲಕ್ಷ ರೂ.ವರೆಗೆ ಸಾಲಗಳನ್ನು ನೀಡುತ್ತದೆ. 5 ಲಕ್ಷ ಮೀರಿ 10 ಲಕ್ಷ ರೂ.ವರೆಗೆ ತರುಣ್ ವಿಭಾಗದಲ್ಲಿ ಸಾಲ ನೀಡುತ್ತದೆ. ನಿಮ್ಮ ಉದ್ಯಮದ ಯೋಜನೆಯ ಅನ್ವಯ ಮುದ್ರಾದ ಮಧ್ಯವರ್ತಿಗಳ ಮೂಲಕ ನಿಯಮಾನುಸಾರ ನೀವು ಹಣಕಾಸು ಪಡೆಯಬಹುದು.

**10. ನಾನು ಫುಡ್ ಪ್ರೊಸೆಸಿಂಗ್ ತಂತ್ರಜ್ಞಾನದಲ್ಲಿ ಡಿಪ್ಲೊಮಾ ಪಡೆದಿದ್ದೇನೆ. ನಾನು ನನ್ನದೇ ಘಟಕ ಪ್ರಾರಂಭಿಸಲು ಬಯಸಿದ್ದೇನೆ. ದಯವಿಟ್ಟು ನನಗೆ ಮಾರ್ಗದರ್ಶನ ನೀಡಿ.**

ಫುಡ್ ಪ್ರೊಸೆಸಿಂಗ್ ಮುದ್ರಾ ಯೋಜನೆಗಳ ಅಡಿಯಲ್ಲಿ ಬರುವ ಅರ್ಹ ಚಟುವಟಿಕೆ. ನೀವು ಮುದ್ರಾ ಯೋಜನೆಗಳ ಅನ್ವಯ ನಿಮ್ಮ ಅಗತ್ಯಕ್ಕೆ ತಕ್ಕಂತೆ ನೆರವು ಪಡೆದುಕೊಳ್ಳಬಹುದು.

**11. ನಾನು ಜರಿ ಕೆಲಸದಲ್ಲಿ ಪರಿಣಿತಿ ಪಡೆದ ಕುಶಲಕರ್ಮಿ. ಇತರರಿಗೆ ಕೆಲಸ ಮಾಡುವುದರ ಬದಲು ನಾನು ನನ್ನದೇ ಆದ ಉದ್ಯಮ ಪ್ರಾರಂಭಿಸಲು ಬಯಸಿದ್ದೇನೆ. ಮುದ್ರಾ ನನಗೆ ನೆರವಾಗುತ್ತದೆಯೇ?**

ನೀವು 'ಶಿಶು' ವಿಭಾಗದಲ್ಲಿ ನಿಮ್ಮದೇ ಆದ ಉದ್ಯಮ ಪ್ರಾರಂಭಿಸಲು ಕಿರುಸಾಲಕ್ಕೆ ನಿಮ್ಮ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಎಂಎಫ್‌ಗಳ ಮೂಲಕ ನೆರವು ಪಡೆಯಬಹುದು.

**12. ನಾನು ಫ್ಯಾಷನ್ ಡಿಸೈನಿಂಗ್‌ನಲ್ಲಿ ಕೋರ್ಸ್ ಮಾಡಿದ್ದೇನೆ. ನಾನು ನನ್ನದೇ ಬೊಟಿಕ್ ತೆರೆದು ನನ್ನದೇ ಆದ ಬ್ರಾಂಡ್ ಅಭಿವೃದ್ಧಿಪಡಿಸಲು ಬಯಸಿದ್ದೇನೆ. ಮುದ್ರಾ ನನಗೆ ಹೇಗೆ ಸಹಾಯ ಮಾಡಬಲ್ಲದು?**

ಮುದ್ರಾ ಮಹಿಳಾ ಉದ್ಯಮಿಗಳಿಗೆ ವಿಶೇಷ ಯೋಜನೆ ಹೊಂದಿದೆ; ಮಹಿಳಾ ಉದ್ಯಮಿ ಯೋಜನೆ. ಎಲ್ಲ ಮೂರು ವಿಭಾಗಗಳಲ್ಲೂ ನೆರವು ನೀಡಲಾಗುತ್ತದೆ. ಅಂದರೆ 'ಶಿಶು', 'ಕಿಶೋರ್' ಮತ್ತು 'ತರುಣ್'.

**13. ನಾನು ಫ್ರಾಂಚೈಸಿ ಮಾದರಿಯಲ್ಲಿ ಕೆಲಸ ಮಾಡಲು ಇಚ್ಛಿಸಿದ್ದೇನೆ ಮತ್ತು ಐಸ್ ಕ್ರೀಂ ಪಾರ್ಲರ್ ತೆರೆಯಲು ಬಯಸಿದ್ದೇನೆ. ಮುದ್ರಾ ನನಗೆ ನೆರವಾಗುವುದೇ?**

ಮುದ್ರಾ ವಿಶೇಷ ಯೋಜನೆಯನ್ನು 'ವ್ಯಾಪಾರಿಗಳು ಮತ್ತು ಅಂಗಡಿ ಮಾಲೀಕರಿಗೆ ವಾಣಿಜ್ಯ ಸಾಲಗಳು' ಅಡಿಯಲ್ಲಿ ನಿರ್ವಹಿಸುತ್ತದೆ. ಈ ಯೋಜನೆಯ ಅನ್ವಯ ನಿಮ್ಮ ಅಗತ್ಯಕ್ಕೆ ತಕ್ಕಂತೆ ಸೌಲಭ್ಯಗಳನ್ನು ಪಡೆಯಬಹುದು.

**14. ನನ್ನ ಮಣ್ಣಿನ ಮಡಕೆ ಉದ್ಯಮವನ್ನು ಹೆಚ್ಚು ವೈವಿಧ್ಯತೆ ಮತ್ತು ವಿನ್ಯಾಸಗಳ ಸೇರ್ಪಡೆಯೊಂದಿಗೆ ವಿಸ್ತರಿಸಲು ಬಯಸಿದ್ದೇನೆ. ಮುದ್ರಾದಿಂದ ನಾನು ಯಾವ ಬಗೆಯ ನೆರವು ಪಡೆಯಬಹುದು?**

ನೀವು ಮುದ್ರಾದ ಮೈಕ್ರೊ ಕ್ರೆಡಿಟ್ ಸ್ಕೀಂನ 'ಶಿಶು' ವಿಭಾಗದಲ್ಲಿ ನೆರವನ್ನು ನಿಮ್ಮ ಉದ್ಯಮ ಇರುವ ನಿಮ್ಮ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುವ ಎಂಎಫ್‌ಐಗಳ ಮೂಲಕ ಪಡೆಯಬಹುದು.

********